ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

21

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 19/3/2021

# ಮಹಾರಾಷ್ಟ್ರಕ್ಕೆ ಚಾಟಿ ಬೀಸಿದ ಸಂಸದ

**ಸಂಸತ್ತಿನಲ್ಲಿ ಕರ್ನಾಟಕ**



- ರಾಜ್ಯಸಭೆಯ ಸಭಾಪತಿಯ ಬಳಿ ಸಮಸ್ಯೆ ನಿವೇದನೆ
- ಮಹಾರಾಷ್ಟ್ರಕ್ಕೆ ಬುದ್ಧಿ ಹೇಳುವಂತೆ ಮನವಿ

ನವದೆಹಲಿ: ಬೆಳಗಾವಿ ವಿಚಾರದಲ್ಲಿ ಪದೇ ಪದೇ ತಗಾದೆ ತೆಗೆಯುವ ಮಹಾರಾಷ್ಟ್ರಕ್ಕೆ ಬುದ್ಧಿಮಾತು ಹೇಳುವಂತೆ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ರಾಜ್ಯಸಭೆಯ ಸಭಾಪತಿಯಾದ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರನ್ನು ಕೋರಿದರು.

ಗುರುವಾರದ ಕಲಾಪದಲ್ಲಿ ಮಾತನಾಡಿದ ಅವರು, 1956ರಲ್ಲಿ ಕೇಂದ್ರ ಸರ್ಕಾರದಿಂದ ಭಾಷಾವಾರು ಪ್ರಾಂತ್ಯ ರಚನೆಯಾದಾಗ ಮಹಾರಾಷ್ಟ್ರ ಬೆಳಗಾವಿ ಬಗ್ಗೆ ಕ್ಯಾತೆ ತೆಗೆದಿತ್ತು. ಮಹಾಜನ್ ವರದಿಯ ಅನುಷ್ಠಾನದ ನಂತರವೂ ಪದೇಪದೆ ಕರ್ನಾಟಕವನ್ನು ಕೆರಳಿಸುತ್ತಿದೆ ಎಂದರು.

ಸಂವಿಧಾನದ ಪರಿಚ್ಛೇದ 263 ಮತ್ತು 331 ರ ಪ್ರಕಾರ, ಗಡಿ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಯದಿದ್ದರೆ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕೆಂದು ಮಹಾಜನ್ ವರದಿಯಲ್ಲಿ ಹೇಳಲಾಗಿದೆ. ಆದರೆ, ಮಹಾರಾಷ್ಟ್ರ ತನ್ನ ರಾಜಕೀಯ ಲಾಭಕ್ಕಾಗಿ ಬೆಳಗಾವಿ ವಿಚಾರವನ್ನು ಪದೇ ಪದೇ ಕೆದಕುತ್ತಿದೆ. ನ. 1ರಂದು ನಾವು ರಾಜ್ಯೋತ್ಸವ ಆಚರಿಸಿದರೆ, ಆ ದಿನವನ್ನು ಸರಳ ದಿನವೆಂದು ಆಚರಿಸುವಂತೆ ಅಲ್ಲಿನ ಕ್ಯಾಬಿನೆಟ್‌ನಲ್ಲಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಬೆಳಗಾವಿಯನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಲಾಗುತ್ತದೆ. ಅಲ್ಲದೆ, 'ಸೀಮಾ ಸಂಕಲ್ಪ' ಎಂಬ ಹೆಸರಿನಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸಲು ಹವಣಿಸುತ್ತಿದೆ. ಆದರೆ, ನಾವು ಒಂದಿಚು ಭೂಮಿಯನ್ನೂ ಬಿಟ್ಟುಕೊಡುವುದಿಲ್ಲ" ಎಂದು ಆರೋಪಿಸಿದರು.

## ಬೆಂಗಳೂರಿಗೆ ಸುಪ್ರೀಂ ಪೀಠ ಕೊಡಿ

ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವನ್ನು ದೇಶದ ನಾನಾ ಕಡೆಗೆ ಸ್ಥಾಪಿಸುವುದು ಇಂದಿನ ಅವಶ್ಯಕತೆಯಾಗಿದ್ದು ಬೆಂಗಳೂರಿನಲ್ಲೂ ಒಂದು ಪೀಠ ಸ್ಥಾಪಿಸಲು ಅನುಮತಿ ಕೊಡಬೇಕು ಎಂದು ಬಿಜೆಪಿಯ ರಾಜ್ಯಸಭಾ ಸಂಸದ ಕೆ.ಸಿ. ರಾಮಮೂರ್ತಿ ಆಗ್ರಹಿಸಿದ್ದಾರೆ. ವಿವಿಧೆಡೆ ಪೀಠ ಸ್ಥಾಪನೆಯಿಂದ ಜನರಿಗೂ ಅನುಕೂಲ ಹಾಗೂ ಪ್ರಕರಣಗಳೂ ತ್ವರಿತವಾಗಿ ಇತ್ಯರ್ಥಗೊಳ್ಳುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ದೆಹಲಿಯಲ್ಲಿರುವ ಸುಪ್ರೀಂ ಕೋರ್ಟ್, ಸಾಂವಿಧಾನಿಕ ವಿಚಾರಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಲಿ. ಸುಪ್ರೀಂ ಕೋರ್ಟ್‌ನ ವಿವಿಧ ಪೀಠಗಳು ಮೇಲ್ಮನವಿ ಮುಂತಾದ ಪ್ರಕರಣಗಳ ವಿಚಾರಣೆ ನಡೆಸಲಿ ಎಂದು ಅವರು ವಿವರಿಸಿದರು.